ನಿಸರ್ಗದ ಸಂಪತ್ತು 6ನೇ ತರಗತಿ ವಿಜ್ಞಾನ ಕುತೂಹಲ ಭಾಗ-2 ಅಧ್ಯಾಯ 11 ರ ಪ್ರಶ್ನೋತ್ತರಗಳು ನೋಟ್ಸ್

# ನಿಸರ್ಗದ ಸಂಪತ್ತು

## 6ನೇ ತರಗತಿ ವಿಜ್ಞಾನ ಕುತೂಹಲ ಭಾಗ-2 ಅಧ್ಯಾಯ 11 ರ ಪ್ರಶ್ನೋತ್ತರಗಳು ನೋಟ್ಸ್

೧. ನೈಸರ್ಗಿಕ ಸಂಪನ್ಮೂಲಗಳಿಗೆ ಸಂಬಂಧಿಸಿದಂತೆ ಚಿತ್ರ ೧೧.೯ ಕೆಲವು ವಸ್ತುಗಳನ್ನು ತೋರಿಸುತ್ತದೆ. ಕಲಸಿದ ಅಕ್ಷರಗಳುಳ್ಳ ಹೆಸರುಗಳೊಂದಿಗೆ ಆ ಚಿತ್ರಗಳನ್ನು ಹೊಂದಿಸಿ. ಈ ಸಂಪನ್ಮೂಲಗಳ ಹೆಸರನ್ನು ಬರೆದು ಇನ್ನೊಂದು ಕೋಷ್ಟಕ ಮಾಡಿ. ಇವುಗಳನ್ನು ನವೀಕರಿಸಬಹುದಾದ ಅಥವಾ ನವೀಕರಿಸಲಾಗದ ಸಂಪನ್ಮೂಲಗಳೆಂದು ವರ್ಗೀಕರಿಸಿ.

1. ನೀರು
2. ಗಾಳಿ ಯಂತ್ರ
3. ಅರಣ್ಯ
4. ಬಂಡೆಗಳು

- ನವೀಕರಿಸಬಹುದಾದ ಸಂಪನ್ಮೂಲಗಳು....ನೀರು, ಗಾಳಿ ಯಂತ್ರ, ಅರಣ್ಯ .
- ನವೀಕರಿಸಲಾಗದ ಸಂಪನ್ಮೂಲಗಳು....ಬಂಡೆಗಳು

೨. ಈ ಕೆಳಗಿನ ಹೇಳಿಕೆಗಳು ಸರಿಯೇ (ಸ), ತಪ್ಪೇ (ತ) ಎಂಬುದನ್ನು ತಿಳಿಸಿ ತಪ್ಪಾಗಿದ್ದರೆ ಅವುಗಳನ್ನು ಸರಿಪಡಿಸಿ ಬರೆಯಿರಿ.

(i) ಮಾನವರ ಅಗತ್ಯಗಳನ್ನು ಪೂರೈಸಲು ನಿಸರ್ಗವು ಸಾಕಷ್ಟು ಸಂಪನ್ಮೂಲಗಳನ್ನು ಹೊಂದಿದೆ.

[ ಸ]

(ii) ಯಂತ್ರಗಳು ನಿಸರ್ಗದಲ್ಲಿ ಕಂಡುಬರುವ ಸಂಪನ್ಮೂಲವಾಗಿದೆ. [ತ ]

(iii) ನೈಸರ್ಗಿಕ ಅನಿಲವು ಒಂದು ನವೀಕರಿಸಲಾಗದ ಸಂಪನ್ಮೂಲ. [ಸ ]

(iv) ಗಾಳಿ ಒಂದು ನವೀಕರಿಸಬಹುದಾದ ಸಂಪನ್ಮೂಲ. [ ಸ]

೩. ಅತ್ಯಂತ ಸೂಕ್ತವಾದ ಆಯ್ಕೆಯನ್ನು ಬಳಸಿಕೊಂಡು ಖಾಲಿ ಜಾಗಗಳನ್ನು ಭರ್ತಿ ಮಾಡಿ.

(i) ಸ್ಕೂಟರ್ ಅಥವಾ ಬೈಕ್‌ಗಳಂತಹ ದ್ವಿಚಕ್ರ ವಾಹನಗಳಲ್ಲಿ ಸಾಮಾನ್ಯವಾಗಿ ಬಳಸುವ ಇಂಧನ....

a) ಸೀಮೆಎಣ್ಣೆ

b) ಪೆಟ್ರೋಲ್

c) ಡೀಸೆಲ್

d) LPG

ಉತ್ತರ

b) ಪೆಟ್ರೋಲ್

(ii) ನವೀಕರಿಸಬಹುದಾದ ಸಂಪನ್ಮೂಲಕ್ಕೆ ಒಂದು ಉದಾಹರಣೆ............

ಚಿ) ಕಲ್ಲಿದ್ದಲು
b) ನೀರು
ಛಿ) ನೈಸರ್ಗಿಕ ಅನಿಲ
ಜ) ಪೆಟ್ರೋಲ್

ಉತ್ತರ
b) ನೀರು

೪. ಈ ಕೆಳಗಿನವುಗಳನ್ನು ನವೀಕರಿಸಬಹುದಾದ ಅಥವಾ ನವೀಕರಿಸಲಾಗದ ಸಂಪನ್ಮೂಲಗಳಾಗಿ ವರ್ಗೀಕರಿಸಿ. ಕಲ್ಲಿದ್ದಲು, ನೈಸರ್ಗಿಕ ಅನಿಲ, ಅರಣ್ಯಗಳು ಮತ್ತು ಖನಿಜಗಳು.

1.ನವೀಕರಿಸಬಹುದಾದ ಸಂಪನ್ಮೂಲಗಳು .......ಅರಣ್ಯಗಳು.
2.ನವೀಕರಿಸಲಾಗದ ಸಂಪನ್ಮೂಲಗಳು ....ಕಲ್ಲಿದ್ದಲು ಖನಿಜಗಳು, ನೈಸರ್ಗಿಕ ಅನಿಲ.

೫. ಪೆಟ್ರೋಲಿಯಂ ಅನ್ನು ನವೀಕರಿಸಲಾಗದ ಸಂಪನ್ಮೂಲ ಎಂದು ನಾವು ಏಕೆ ಹೇಳುತ್ತೇವೆ?

ಪೆಟ್ರೋಲಿಯಂ ಒಂದು ಪಳೆಯುಳಿಕೆ ಇಂಧನವಾಗಿದ್ದು, ನಿರಂತರವಾಗಿ ಬಳಸಿದರೆ ಅದು ಮುಗಿದು ಹೋಗುತ್ತದೆ. ಮತ್ತೆ ಹೊಸದಾಗಿ ಉತ್ಪತ್ತಿ ಸಾಧ್ಯವಿಲ್ಲ. ಏಕೆಂದರೆ ಅದು ಉತ್ಪತ್ತಿಯಾಗಲು ಲಕ್ಷಾಂತರ ವರ್ಷಗಳನ್ನು ತೆಗೆದುಕೊಂಡಿದೆ. ಇದು ಸೀಮಿತ ಪ್ರಮಾಣದಲ್ಲಿ ಭೂಮಿಯ ಒಳಗೆ ಲಭ್ಯವಿದ್ದು ಮುಗಿದು ಹೋದರೆ ಮರುಪೂರ್ಣಗೊಳಿಸಲು ಆಗುವುದಿಲ್ಲ. ಆದುದರಿಂದ

ಪೆಟ್ರೋಲಿಯಂ ಅನ್ನು ನವೀಕರಿಸಲಾಗದ ಸಂಪನ್ಮೂಲ ಎಂದು ಕರೆಯುತ್ತಾರೆ.

೬. ಕಾಡುಗಳನ್ನು ಪುನಃ ಬೆಳೆಸುವುದು ಕಷ್ಟ. ಈ ಹೇಳಿಕೆಯನ್ನು ಸ್ಪಷ್ಟೀಕರಿಸಿ.

ಹೊಸ ಕಾಡು ಬೆಳೆಯಲು ಅಥವಾ ನಾಶವಾದ ಅರಣ್ಯವನ್ನು ಪುನರುಜ್ಜೀವನಗೊಳಿಸಲು ಹತ್ತಾರು ವರ್ಷಗಳು ಬೇಕಾಗುತ್ತವೆ. ಇದಲ್ಲದೆ ಬೇರೆ ಬೇರೆ ಅಡಚಣೆಗಳಿಂದ ಕಾಡನ್ನು ಬೆಳೆಸುವುದು ಕಷ್ಟವಾಗುತ್ತದೆ. ಉದಾಹರಣೆಗೆ ಮರಗಳರಿಂದ ಮರಗಳನ್ನು ರಕ್ಷಿಸುವುದು, ಮತ್ತು ವಿವಿಧ ಉದ್ದೇಶಗಳಿಗಾಗಿ ಕಾಡುಗಳ ಮರಗಳನ್ನು ಕಡಿಯುವುದು ಇವುಗಳಿಂದ ರಕ್ಷಿಸಿ ಕಾಡನ್ನು ಬೆಳೆಸುವುದು ಸವಾಲಿನ ಕೆಲಸವಾಗಿದೆ.

೭. ನೈಸರ್ಗಿಕ ಸಂಪನ್ಮೂಲಗಳನ್ನು ಬಳಕೆ ಮಾಡುವ ನಿಮ್ಮ ದೈನಂದಿನ ಐದು ಚಟುವಟಿಕೆಗಳನ್ನು ಪಟ್ಟಿ ಮಾಡಿ.

1. ನೀರನ್ನು ಕುಡಿಯುತ್ತೇವೆ.
2. ಗಾಳಿಯಿಂದ ಉಸಿರಾಡುತ್ತೇವೆ.
3. ಸೂರ್ಯನಿಂದ ಶಾಖ ಮತ್ತು ಬೆಳಕನ್ನು ಪಡೆಯುತ್ತೇವೆ.
4. ಸಸ್ಯಗಳಿಂದ ಮತ್ತು ಪ್ರಾಣಿಗಳಿಂದ ಆಹಾರವನ್ನು ಪಡೆಯುತ್ತೇವೆ.
5. ಬೇರೆ ಬೇರೆ ಲೋಹಗಳಿಂದ ಮಾಡಿದ ಪಾತ್ರೆ ಇತರ ಸಾಮಗ್ರಿಗಳನ್ನು ಬಳಸುತ್ತೇವೆ.

೮. ಗಾಳಿಯ ಉಪಸ್ಥಿತಿಯಿಂದ ಸಾಧ್ಯವಾಗುವ ನಾಲ್ಕು ಚಟುವಟಿಕೆಗಳನ್ನು ಪಟ್ಟಿ ಮಾಡಿ.

1. ಗಾಳಿಪಟವನ್ನು ಹಾರಿಸಬಹುದು.
2. ಗಾಳಿಯಂತ್ರಗಳು ಚಲಿಸಿ ವಿದ್ಯುತ್ ತಯಾರಿಕೆ ಆಗುತ್ತದೆ.
3. ಉಸಿರಾಟ ಸಾಧ್ಯವಾಗಿದೆ.
4. ವಾಹನಗಳ ಟೈರ್‌ಗಳಲ್ಲಿ ಗಾಡಿಯನ್ನು ತುಂಬಿ ವಾಹನಗಳು ಚಲಿಸುವುದು ಸಾಧ್ಯವಾಗಿದೆ.

೯. ನೀವು ವಾಸಿಸುವ ಪ್ರದೇಶದ ಸುತ್ತಲಿನ ಹಸಿರು ಹೊದಿಕೆಯನ್ನು ಹೆಚ್ಚಿಸಲು ನಿಮ್ಮ ಕೊಡುಗೆ ಏನು?
ನೀವು ಕೈಗೊಳ್ಳಬಹುದಾದ ಕ್ರಮಗಳನ್ನು ಪಟ್ಟಿ ಮಾಡಿ.

ಮನೆಯ ಮುಂದೆ ಇರುವ ಜಾಗದಲ್ಲಿ ಹಾಕಬಹುದಾದ ಗಿಡ ಅಥವಾ ಮರಗಳನ್ನು ಹಾಕಬಹುದು. ನೆರಳು ಕೊಡುವ ಮರಗಳನ್ನು ಬೆಳೆಸಬಹುದು ಅಥವಾ ಹಣ್ಣುಗಳನ್ನು ಕೊಡುವ ಗಿಡಮರಗಳನ್ನು ಹಾಕಬಹುದು. ದೀರ್ಘಕಾಲ ಜೀವಿಸುವ ಬಳ್ಳಿಗಳನ್ನು ಹಾಕಿ ಹಸಿರು ಮಾಡಬಹುದು. ವಿವಿಧ ಕುಂಡಗಳನ್ನು ಧರಿಸಿ ಅದರಲ್ಲಿ ಗಿಡಗಳನ್ನು ಹಾಕಿ ಆರೈಕೆ ಮಾಡಬಹುದು. ಹಳ್ಳಿಗಳಲ್ಲಾದರೆ ರಸ್ತೆಯ ಪಕ್ಕ ಗಿಡಗಳನ್ನು ತಂದು ಹಾಕಬಹುದು.

೧೦. ಆಹಾರ ತಯಾರಿಸುತ್ತಿರುವುದನ್ನು ಕೊಟ್ಟಿರುವ ಚಿತ್ರದಲ್ಲಿ ನಾವು ಗಮನಿಸಬಹುದು. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.
ಅ) ಆಹಾರವನ್ನು ತಯಾರಿಸಲು ಯಾವ ರೀತಿಯ ಶಕ್ತಿಯನ್ನು ಬಳಸಲಾಗುತ್ತಿದೆ.

ಸೌರಶಕ್ತಿಯನ್ನು ಬಳಸಲಾಗುತ್ತಿದೆ.

ಆ) ಆಹಾರ ತಯಾರಿಸಲು ಈ ರೀತಿಯ ಶಕ್ತಿಯನ್ನು ಬಳಸುವುದರ ಒಂದು ಅನುಕೂಲ ಮತ್ತು ಒಂದು ಅನನುಕೂಲವನ್ನು ಬರೆಯಿರಿ.

ಅನುಕೂಲ ... ಸೌರಶಕ್ತಿಯು ನವೀಕರಿಸಬಹುದಾದ ಸಂಪನ್ಮೂಲವಾಗಿದ್ದು ಇದರ ಬಳಕೆಯಿಂದ ಯಾವುದೇ ಮಾಲಿನ್ಯ ಉಂಟಾಗುವುದಿಲ್ಲ.
ಅನಾನುಕೂಲ... ಸೂರ್ಯನ ಶಾಖ ಇಲ್ಲದ ಸಮಯದಲ್ಲಿ ಅಡುಗೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

೧೧. ಮರಗಳನ್ನು ಬೃಹತ್ ಪ್ರಮಾಣದಲ್ಲಿ ಕಡಿಯುವುದರಿಂದ ಮಣ್ಣಿನ ಗುಣಮಟ್ಟದ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ ಎಂದೇಕೆ ನೀವು ಯೋಚಿಸುವಿರಿ?

ಮರಗಳನ್ನು ಬೃಹತ್ ಪ್ರಮಾಣದಲ್ಲಿ ಕಡಿಯುವುದರಿಂದ ಮಳೆ ನೀರು ಇಂಗುವುದು ನಿಲ್ಲುತ್ತದೆ. ಮತ್ತು ಮಳೆ ನೀರು ಫಲವತ್ತಾದ ಮೇಲ್ಮಣ್ಣನ್ನು ಕೊಂಡೊಯ್ದು ತಗ್ಗು ಪ್ರದೇಶಗಳಿಗೆ ಅಥವಾ ಕೆರೆ ನದಿಗಳ ತಳಗಳಿಗೆ ಸೇರಿಸುತ್ತದೆ. ಇದರಿಂದ ಫಲವತ್ತಾದ ಮೇಲ್ಮಣ್ಣು ನಷ್ಟವಾಗಿ ಭೂಮಿಯು ಬರಡಾಗುತ್ತದೆ. ನೆಲದ ಮೇಲ್ಮೈಯಲ್ಲಿ ಕೊರಕಲುಗಳು ಕಾಣುತ್ತವೆ. ಪ್ರವಾಹಗಳು ಹೆಚ್ಚಾಗುತ್ತವೆ.

೧೨. ಗಾಳಿಯನ್ನು ಕಲುಷಿತಗೊಳಿಸುವ ಎರಡು ಮಾನವ ಚಟುವಟಿಕೆಗಳನ್ನು ವಿವರಿಸಿ. ವಾಯುಮಾಲಿನ್ಯವನ್ನು ಕಡಿಮೆ ಮಾಡಲು ಸಹಾಯ ಮಾಡುವ ಒಂದು ಕ್ರಮವನ್ನು ಸೂಚಿಸಿ.

ವಾಹನಗಳು ಮತ್ತು ಕಾರ್ಖಾನೆಗಳಲ್ಲಿ ಪಳೆಯುಳಿಕೆ ಇಂಧನಗಳನ್ನು ಸುಡುವುದರಿಂದ ಕಾರ್ಬನ್ ಮಾನಾಕ್ಸೈಡ್ ಮತ್ತು ಸಲ್ಫರ್ ಡೈಆಕ್ಸೈಡ್‌ನಂತಹ ಹಾನಿಕಾರಕ ಮಾಲಿನ್ಯಕಾರಕಗಳು ಗಾಳಿಯಲ್ಲಿ ಬಿಡುಗಡೆಯಾಗುತ್ತವೆ.

ಅರಣ್ಯನಾಶವು ಕಾರ್ಬನ್ ಡೈಆಕ್ಸೈಡ್ ಅನ್ನು ಹೀರಿಕೊಳ್ಳುವ ಮರಗಳ ಸಂಖ್ಯೆಯನ್ನು ಕಡಿಮೆ ಮಾಡುತ್ತದೆ, ಹಸಿರುಮನೆ ಅನಿಲಗಳ ಸಾಂದ್ರತೆಯನ್ನು ಹೆಚ್ಚಿಸುತ್ತದೆ.

ವಾಯು ಮಾಲಿನ್ಯವನ್ನು ಕಡಿಮೆ ಮಾಡಲು ಕ್ರಮ

ರಸ್ತೆಯಲ್ಲಿ ಇಂಧನ ಚಾಲಿತ ವಾಹನಗಳ ಸಂಖ್ಯೆಯನ್ನು ಕಡಿಮೆ ಮಾಡಿ , ಸಾರ್ವಜನಿಕ ಸಾರಿಗೆ ಮತ್ತು ವಿದ್ಯುತ್ ವಾಹನಗಳ ಬಳಕೆಯನ್ನು ಉತ್ತೇಜಿಸಬೇಕು.

೧೩. ಒಂದು ಕುಟುಂಬವು ವಿದ್ಯುತ್ ಉತ್ಪಾದಿಸಲು ಸೌರ ಫಲಕಗಳನ್ನು, ಅಡುಗೆ ಮಾಡಲು ಅನಿಲ ಒಲೆಯನ್ನು
ಮತ್ತು ಬಾವಿಯಿಂದ ನೀರನ್ನು ಮೇಲೆತ್ತಲು ಗಾಳಿಯಂತ್ರವನ್ನು ಬಳಸುತ್ತದೆ. ಒಂದು ವಾರ ಸೂರ್ಯನ
ಬೆಳಕು ಇಲ್ಲದಿದ್ದರೆ ಏನಾಗುತ್ತದೆ?

ಒಂದು ವಾರ ಸೂರ್ಯನ ಬೆಳಕು ಇಲ್ಲದಿದ್ದರೆ, ಸೌರ ಫಲಕಗಳು ವಿದ್ಯುತ್ ಉತ್ಪಾದಿಸಲು ಸಾಧ್ಯವಾಗುವುದಿಲ್ಲ, ಇದರಿಂದಾಗಿ ಕುಟುಂಬವು ಪರ್ಯಾಯ

ವಿದ್ಯುತ್ ಮೂಲಗಳನ್ನು ಅವಲಂಬಿಸಬೇಕಾಗುತ್ತದೆ. ಅಡುಗೆ ಮಾಡಲು ಅನಿಲ ಒಲೆಯನ್ನು ಬಳಸುತ್ತಿರುವುದರಿಂದ ಏನು ತೊಂದರೆ ಆಗುವುದಿಲ್ಲ. ರಾತ್ರಿ ಬೆಳಕಿಗಾಗಿ ಯಾವುದಾದರೂ ಎಣ್ಣೆ ದೀಪಗಳನ್ನು ಬಳಸಬಹುದು.
ಬಾವಿಯಿಂದ ನೀರನ್ನು ಎತ್ತಲು ಸೂರ್ಯನ ಬೆಳಕು ಇಲ್ಲದಿರುವುದು ಏನು ಸಮಸ್ಯೆ ಆಗುವುದಿಲ್ಲ.

೧೪. ಕೆಳಗೆ ನೀಡಿರುವ ಪದಗಳನ್ನು ಬಳಸಿಕೊಂಡು ಖಾಲಿ ಜಾಗಗಳನ್ನು ಭರ್ತಿ ಮಾಡಿ.
(ಪಳೆಯುಳಿಕೆ ಇಂಧನಗಳು, ಅರಣ್ಯ, ಗಾಳಿ, ಪೆಟ್ರೋಲಿಯಂ, ಕಲ್ಲಿದ್ದಲು, ನೀರು ಮತ್ತು ನವೀಕರಿಸಲಾಗದ
ಸಂಪನ್ಮೂಲಗಳು.)

೧೫. ಕೈಗಾರಿಕೆಗಳು ಮತ್ತು ವಸತಿಗಳ ಅವಶ್ಯಕತೆಗಳನ್ನು ಪೂರೈಸಲು ಮರಗಳಿಗಾಗಿ ಬೇಡಿಕೆ ಹೆಚ್ಚುತ್ತಿದೆ. ಅದಕ್ಕಾಗಿಯೇ ನಿರಂತರವಾಗಿ ಮರಗಳನ್ನು ಕಡಿಯಲಾಗುತ್ತಿದೆ. ಇದನ್ನು ಸಮರ್ಥಿಸಬಹುದೇ? ಚರ್ಚಿಸಿ ಮತ್ತು ಸಂಕ್ಷಿಪ್ತ ವರದಿಯನ್ನು ತಯಾರಿಸಿ.

ಕೈಗಾರಿಕೆಗಳು ಮತ್ತು ವಸತಿಗಳ ಅಗತ್ಯಗಳನ್ನು ಪೂರೈಸಲು ಮರಗಳಿಗೆ ಹೆಚ್ಚುತ್ತಿರುವ ಬೇಡಿಕೆ ಅರ್ಥವಾಗುವಂತಹದ್ದೇ ಆದರೆ ಸಮರ್ಥನೀಯವಲ್ಲ. ಆಮ್ಲಜನಕವನ್ನು ಒದಗಿಸುವ ಮೂಲಕ, ವನ್ಯಜೀವಿಗಳಿಗೆ ಆಶ್ರಯ ನೀಡುವ ಮೂಲಕ ಮತ್ತು ಮಣ್ಣಿನ ಸವೆತವನ್ನು ತಡೆಗಟ್ಟುವ ಮೂಲಕ ಪರಿಸರ

ಸಮತೋಲನವನ್ನು ಕಾಪಾಡಿಕೊಳ್ಳುವಲ್ಲಿ ಮರಗಳು ಮಹತ್ತರ ಪಾತ್ರ ವಹಿಸುತ್ತವೆ. ದೊಡ್ಡ ಪ್ರಮಾಣದ ಅರಣ್ಯನಾಶವು ಜೀವವೈವಿಧ್ಯತೆಯ ನಷ್ಟ, ಹವಾಮಾನ ಬದಲಾವಣೆ ಮತ್ತು ಜಲ ಚಕ್ರಗಳ ಏರುಪೇರಿಗೆ ಕಾರಣವಾಗಬಹುದು. ಪರ್ಯಾಯ ವಸ್ತುಗಳನ್ನು ಬಳಸುವುದು, ಮರ ಕಡಿಯುವುದರ ಮೇಲೆ ಕಠಿಣ ನಿಯಮಗಳನ್ನು ಜಾರಿಗೆ ತರುವುದು ಮತ್ತು ಮರು ಅರಣ್ಯೀಕರಣವನ್ನು ಪ್ರೋತ್ಸಾಹಿಸುವಂತಹ ಸುಸ್ಥಿರ ಅಭ್ಯಾಸಗಳು ಆರ್ಥಿಕ ಅಭಿವೃದ್ಧಿಯನ್ನು ಪರಿಸರ ಸಂರಕ್ಷಣೆಯೊಂದಿಗೆ ಸಮತೋಲನಗೊಳಿಸಲು ಸಹಾಯ ಮಾಡುತ್ತದೆ.

೧೬. ನಿಮ್ಮ ಶಾಲೆಯಲ್ಲಿ ನೀರಿನ ಬಳಕೆಯನ್ನು ಕಡಿಮೆ ಮಾಡಲು ಒಂದು ಯೋಜನೆಯನ್ನು ರೂಪಿಸಿ. ಯೋಜನೆಯನ್ನು ಕಾರ್ಯಗತಗೊಳಿಸಲು ನೀವು ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ ಮತ್ತು ಅದು ಪರಿಸರಕ್ಕೆ ಹೇಗೆ ಸಹಾಯಮಾಡುತ್ತದೆ?

ಕಡಿಮೆ ನೀರನ್ನು ಬಳಸಲು ಯೋಜನೆ

- ನೀರಿನ-ಸಮರ್ಥ ನಲ್ಲಿಗಳು ಮತ್ತು ಶೌಚಾಲಯಗಳನ್ನು ನಿರ್ಮಿಸಿ.
- ನೀರು ವ್ಯರ್ಥವಾಗುವುದನ್ನು ತಡೆಗಟ್ಟಲು ಸೋರಿಕೆಯನ್ನು ತಕ್ಷಣ ಮಳೆ ನೀರು ಸರಿಪಡಿಸಿ.
- ಮಳೆನೀರು ಕೊಯ್ಲು ವ್ಯವಸ್ಥೆಯನ್ನು ಅಳವಡಿಸಿಕೊಳ್ಳಿ.

- ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗೆ ನೀರಿನ ಸಂರಕ್ಷಣಾ ಕ್ರಮಗಳ ಬಗ್ಗೆ ಶಿಕ್ಷಣ ನೀಡಿ.

- ಗಿಡಮರಗಳನ್ನು ಬೆಳೆಸಲು ಉಪಯೋಗಿಸಿದ ವ್ಯರ್ಥವಾದ ನೀರನ್ನು ಬಳಸಿ.

ಯೋಜನೆಯನ್ನು ಕಾರ್ಯಗತಗೊಳಿಸಲು ಕ್ರಮಗಳು

1. ನೀರು ಪೋಲಾಗುವ ಸ್ಥಳಗಳನ್ನು ಗುರುತಿಸಲು ಶೋಧನೆ ನಡೆಸಿ.
2. ನೀರನ್ನು ಸಂರಕ್ಷಿಸುವ ಸಾಧನಗಳನ್ನು ಸ್ಥಾಪಿಸಲು ಸ್ಥಳೀಯ ಅಧಿಕಾರಿಗಳು ಮತ್ತು ತಜ್ಞರೊಂದಿಗೆ ಸಹಕರಿಸಿ.
3. ಜಾಗೃತಿ ಮೂಡಿಸಲು ಕಾರ್ಯಾಗಾರಗಳು ಮತ್ತು ಜಾಥಾ ಗಳನ್ನು ಆಯೋಜಿಸಿ.
4. ನಿಯಮಿತವಾಗಿ ನೀರಿನ ಬಳಕೆಯನ್ನು ಮೇಲ್ವಿಚಾರಣೆ ಮಾಡಿ ಮತ್ತು ಬಳಕೆ ನಿಯಂತ್ರಣ ಗುರಿಗಳನ್ನು ಗೊತ್ತು ಮಾಡಿ.
5. ನೀರಿನ ಸಂರಕ್ಷಣೆಗಾಗಿ ವಿದ್ಯಾರ್ಥಿಗಳ ನೇತೃತ್ವದ ಸಂಘಗಳನ್ನು ಪ್ರೋತ್ಸಾಹಿಸಿ.

ಪರಿಸರ ಪ್ರಯೋಜನಗಳು

1. ಸ್ಥಳೀಯ ನೀರಿನ ಮೂಲಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡುತ್ತದೆ.
2. ನೀರಿನ ಸಂಸ್ಕರಣೆ ಮತ್ತು ವಿತರಣೆಯಲ್ಲಿ ಬಳಸುವ ಶಕ್ತಿಯನ್ನು ಕಡಿಮೆ ಮಾಡುತ್ತದೆ.

3. ಸಮುದಾಯದಲ್ಲಿ ಸುಸ್ಥಿರತೆ ಮತ್ತು ಜವಾಬ್ದಾರಿಯುತ ನೀರಿನ ಬಳಕೆಯನ್ನು ಉತ್ತೇಜಿಸುತ್ತದೆ.